**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ ನಂ. 63/2021**

ಪ್ರಾಸಾಃ 1 (ಚಾಸಾಃ1 )

ಪ್ರಮಾಣೀಕರಿಸಿದ ದಿಃ28.03.2023

| | |
|---|---|
| ಹೆಸರು | ಃ ಜಿ.ಕೆ. ವೆಂಕಟರಾಯಪ್ಪ |
| ತಂದೆಯ ಹೆಸರು | ಃ ಕೊಂಡಪ್ಪ |
| ವಯಸ್ಸು | ಃ 82 ವರ್ಷ |
| ಕೆಲಸ | ಃ ನಿವೃತ್ತ ಉಪ ತಹಸೀಲ್ದಾರ್ |
| ವಾಸ | ಃ ಕೋಲಾರ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಬಿ ವಿ ಆನಂದಲುನಾಯ್ಡು, ಆದಿ ನಾರಾಯಣ, ವರಲಕ್ಷ್ಮಿ, ಚೌಡರೆಡ್ಡಿ, ಪ್ರಸನ್ನಕುಮಾರ್, ಭಾಸ್ಕರ್ ಗೊತ್ತಿರುತ್ತದೆ. ಅದಿನಾರಾಯಣ ಮತ್ತು ಚೌಡರೆಡ್ಡಿ ಸತ್ತು ಹೋಗಿದ್ದಾರೆ. ಈ ಪ್ರಕರಣದ 3 ಜನ ಆರೋಪಿತರಾದ ವೀರಣ್ಣ , ಪದ್ಮಾವತಮ್ಮ , ಶ್ರೀನಿವಾಸ ಆಲಿಯಾಸ್ ವಿಜಿ ಗೊತ್ತಿರುತ್ತದೆ. 14 ವರ್ಷದ ಹಿಂದೆ ನನ್ನ ಮಗ ಬಿ ವಿ ಚಂದ್ರಶೇಖರ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದಾರೆ.

1 ಮತ್ತು 2 ನೇ ಆರೋಪಿತರ ಮಗಳಾದ ವಸುಧ ರವರವನ್ನು ನನ್ನ ಮಗ ಜಿ ಸಿ ಚಂದ್ರಶೇಖರ ರವರು ಪ್ರೀತಿ ಮಾಡಿ ರಿಜಿಸ್ಟರ್ ಮದುವೆ ಮಾಡಿಕೊಂಡಿದ್ದರು. ಅವರು ರಿಜಿಸ್ಟರ್ ಮದುವೆ ಮಾಡಿಕೊಂಡ 5 ತಿಂಗಳ ಒಳಗೆ ಅವರುಗಳು ಕೇಳಿಕೊಂಡಂತೆ ಬೆಂಗಳೂರಿನ ಭಾಷ್ಯಂ ಸರ್ಕಲ್ ನಲ್ಲಿರುವ ಒಂದು ದೇವಸ್ಥಾನದಲ್ಲಿ ನಾವು ಸಾಂಪ್ರದಾಯಿಕವಾಗಿ ಅವರಿಬ್ಬರಾ

ಮದುವೆ ಮಾಡಿಕೊಟ್ಟೆವು. ಸದರಿ ಮದುವೆಗೆ ಆತನ ತಂದೆ ತಾಯಿಯರು ಬಂದಿರಲಿಲ್ಲ. ನನ್ನ ಮಗ ಕೆ ಎಂ ಎಫ್ ನಲ್ಲಿ ನೌಕರಿಯಲ್ಲಿದ್ದ. ಮದುವೆಯಾದ ನಂತರ ಆತನನ್ನು ಧಾರವಾಡದ ಕೆಎಂ ಎಫ್ ಗೆ ವರ್ಗಾವಣೆ ಮಾಡಿದರು. ಅವರಿಬ್ಬರಿಗೂ ಒಂದು ಗಂಡು ಮಗು ಆಯಿತು. ನನ್ನ ಸೊಸೆಗೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ನೇಮಕ ಆಯಿತು. ಆ ಮಧ್ಯದಲ್ಲಿ ನನಗೆ ಹೃದಯಾಘಾತ ಆಗಿದ್ದು ನನ್ನ ಯೋಗ ಕ್ಷೇಮಕ್ಕೆ ಅನುಕೂಲ ಆಗಲೆಂದು ಬೆಂಗಳೂರಿನ ಯಲಹಂಕದಲ್ಲಿರುವ ಕೆ ಎಂ ಎಫ್ ಗೆ ನನ್ನ ಮಗನನ್ನು ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಿಸಿಕೊಂಡಿದೆ. ನನ್ನ ಸೊಸೆಯನ್ನು ಚಿಕ್ಕಬಳ್ಳಾಪುರದ ಶಾಲೆಗೆ ವರ್ಗಾವಣೆ ಮಾಡಿಸಿಕೊಂಡಿದ್ದೆವು. ಚಿಕ್ಕಬಳ್ಳಾಪುರದಲ್ಲಿ ನನ್ನ ಮಗ ಸ್ವಂತ ಮನೆ ಕಟ್ಟಿಸಿಕೊಂಡಿದ್ದ. ಅದರಲ್ಲಿ ಅವರಿಬ್ಬರೂ ವಾಸವಿದ್ದರು. ಮೂರು ಜನ ಆರೋಪಿತರು ಹೇಳದೆ ಕೇಳದೆ ಚಿಕ್ಕಬಳ್ಳಾಪುರದದಲ್ಲಿರುವ ನನ್ನ ಮಗನ ಮನೆಗೆ ಬಂದು ಸೇರಿಕೊಂಡರು. ಆರೋಪಿತರು ಮಾಡಿಕೊಂಡಿದ್ದ ಸಾಲಗಳನ್ನು ನನ್ನ ಮಗ ತೀರಿಸಿದ್ದ. ಇನ್ನೂ ಹೆಚ್ಚು ಹಣ ಕೊಡುವಂತೆ ಅವರು ನನ್ನ ಮಗನನ್ನು ಒತ್ತಾಯಿಸಿದ್ದರು. ನನ್ನ ಮಗ ಒಂದು ನಿವೇಶನ ಕೊಂಡುಕೊಳ್ಳುವ ಪ್ರಯತ್ನದಲ್ಲಿದ್ದ. ಸದರಿ ನಿವೇಶವನ್ನು 3 ನೇ ಆರೋಪಿತನ ಹೆಸರಿಗೆ ಬರಬೇಕೆಂದುದು ಅವರ ಒತ್ತಾಯ ಇತ್ತು. ಈ ಸಂಬಂಧ ನನ್ನ ಮಗ ಮತ್ತು ಆರೋಪಿತರ ಮಧ್ಯೆ ಮನಸ್ತಾಪ ಉಂಟಾಯಿತು. ಆಗ ಆರೋಪಿತರು ನನ್ನ ಮಗನಿಗೆ ಬೈಯುವುದು ಇತ್ಯಾದಿಯಾಗಿ ಮಾಡಿ ಮಾನಸಿಕ ವಾಗಿ ಹಿಂಸೆ ಕೊಡುತ್ತಿದ್ದರು.

ದಿನಾಂಕ 08/10/2008 ರಂದು ರಾತ್ರಿ ವೇಳೆಯಲ್ಲಿ ನನ್ನ ಮಗನನ್ನು ಮನೆಯಲ್ಲಿ ಕೂಡಿ ಹಾಕಿಕೊಂಡು 1 ಮತ್ತು 2 ನೇ ಆರೋಪಿತರು ನನಖ್ನ ಮಗನನ್ನು ಹಿಡಿದುಕೊಂಡು 3 ನೇ ಆರೋಪಿತ ಆತನನ್ನು ಕೈನಲ್ಲಿ ಮತ್ತು ಗಾಜಿನ ಚೂರಿನಲ್ಲಿ ಹೊಡೆದಿದ್ದರು. ಆ ಗಾಜಿನ ಚೂರಿನಿಂದ ತಿವಿದಾಗ ಎಡಗೈ ಮತ್ತು ಎಡಕಣ್ಣಿಗೆ ಪೆಟ್ಟುಗಳಾದವು.

ನನ್ನ ಮಗನ ಹತ್ತಿರ 4 ಎ ಟಿ ಎಂ ಕಾರ್ಡುಗಳು ಇದ್ದವು. ಮೂರು ಜನ ಆರೋಪಿತರು ನನ್ನ ಮಗನ ಕಡೆಯಿಂದ 4 ಎ ಟಿ ಎಂ ಕಾರ್ಡುಗಳನ್ನು ಕಿತ್ತುಕೊಂಡಿದ್ದರು. ಆ ದಿವಸ ರಾತ್ರಿ 8 ಗಂಟೆಗೆ ನನ್ನ ಮಗ ಹತ್ತಿರದಲ್ಲೇ ಇದ್ದ ಒಬ್ಬ ಖಾಸಗಿ ವೈದರ ಹತ್ತಿರ ಚಿಕಿತ್ಸೆ ಮಾಡಿಸಿಕೊಂಡು ಚಿಕ್ಕಬಳ್ಳಾಪುರ ಟೌನ್‌ನಲ್ಲಿದ್ದ ನನ್ನ ತಮ್ಮ ಜಿ ಕೆ ಸಂಜೀವಯ್ಯನ ಮನೆಯಲ್ಲಿ ತಂಗಿದ್ದ. ಮಾರನೇ ದಿವಸ ಬೆಳಗ್ಗೆ ಕೋಲಾರಕ್ಕೆ ಬಂದ. ಆ ಸಮಯದಲ್ಲಿ ನಾನು ಮನೆಯಲ್ಲಿ ಇರಲಿಲ್ಲ ನಾನು ನನ್ನ ಆರೋಗ್ಯದ ತಪಾಸಣೆಗೆ ಬೆಂಗಳೂರಿಗೆ ಹೋಗಿದ್ದೆ. ಆ ದಿವಸ ಸಾಯಂಕಾಲ ನಾನು ಮನೆಗೆ ವಾವಸ್ಸು ಬಂದೆ. ಆಗ ನಡೆದ ವಿಚಾರ ನನ್ನ ಮಗ ನನಗೆ ಹೇಳಿಕೊಂಡ. ಆತನನ್ನು ನೋಡಿದಾಗ ಆತನಿಗೆ ಆಗಿದ್ದ ಗಾಯಗಳು ಕಂಡುಬಂದವು. ಆತನು ಮಾನಸಿಕವಾಗಿ ಬಹಳ ಜರ್ಜರಿತವಾಗಿದ್ದ. ಆತನನ್ನು ಕೊ;ಲಾರದ ಎಸ್ಸೆನಾರ್ ಆಸ್ಪತ್ರೆಗೆ ಸೇರಿಸಿದ್ದೆ. 5 ದಿವಸಗಳ ಕಾಲ 10/10/2008 ರಿಂದ 15/10/2008 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ. ಆತನು ಅಸ್ಪತ್ರೆಯಲ್ಲಿದ್ದಾಗ ನನ್ನ ಮಗ ಚಿಕ್ಕಬಳ್ಳಾಪುರ ಪೊಲಿಸ್ ಠಾಣೆಗೆ ದೂರು ಕೊಡುವಂತೆ ನನ್ನ ಮುಖಾಂತರ ಕಳುಹಿಸಿದ. ಆತನು ಸಿದ್ದಪಡಿಸಿಕೊಟ್ಟಿದ್ದ ದೂರನ್ನು ನಾನು ಚಿಕ್ಕಬಳ್ಳಾಪುರ ಪೊಲೀಸರಿಗೆ ತಲುಪಿಸಿದೆ. ಸದರಿ ದೂರಿನ ಪ್ರಕಾರ ಕ್ರೈಂ ನಂ. 138/2008 ರಲ್ಲಿ ಪ್ರಕರಣ

ದಾಖಲು ಮಾಡಿಕೊಂಡರು. ಸದರಿ ಪ್ರಕರಣದಲ್ಲಿ ವಿಚಾರಣೆ ನಡೆದು ಪ್ರತ್ಯಕ್ಷ ಸಾಕ್ಷಿಗಳು ಇಲ್ಲ ಎನ್ನುವ ಕಾರಣಕ್ಕೆ ಆರೋಪಿತರನ್ನು ಖುಲಾಸೆ ಗೊಳಿಸಿದ್ದರು.

ದಿನಾಂಕ 15/10/2008 ರಂದು ನನ್ನ ಮಗ ಎಸ್ಸೆನಾರ್ ಆಸ್ಪತ್ರೆಯಿಂದ ಬಿಡುಗಡೆ ಆಗಿ ಬಂದು ನನ್ನ ಮನೆಯಲ್ಲಿದ್ದಾಗ ದಿನಾಂಕ 20/10/2008 ರಂದು ನಾವು ಮನೆಯಲ್ಲಿ ಇಲ್ಲದಾಗ ನನ್ನ ಮಗ ನೇಣು ಹಾಕಿಕೊಂಡು ಸತ್ತ. ಆತನು ನಮ್ಮ ಮನೆಯಲ್ಲಿದ್ದಾಗ ಆತನಿಗೆ ನಾವು ದೈರ್ಯ ಹೇಳುತ್ತಿದ್ದೆವು. ನೀನು ಯೋಚನೆ ಮಾಡಬೇಡ ಅವರ ವಿರುದ್ದ ಕಾನೂನು ಕ್ರಮ ಜರುಗಿಸಲು ಆಗುತ್ತದೆ ಎಂದು ದೈರ್ಯ ಹೇಳುತ್ತಿದ್ದೆವು. ಆ ಕಾಲಕ್ಕೆ ನಾನು ನಿವೃತ್ತಿ ನಂತರ ಎನ್ ಹೆಚ್ 4 ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಆ ದಿವಸ ಮಧ್ಯಾಹ್ನ ಕೆಲಸದಿಂದ ಊಟಕ್ಕೆಂದು ಮನೆಗೆ ಬಂದಾಗ ನನ್ನ ಮನೆಯ ಬಾಗಿಲು ಹಾಕಿದಂತೆ ಇತ್ತು. ಮನೆಯ ಒಳಗಿನಿಂದ ಟಿ ವಿ ಶಬ್ದ ಕೇಳಿಸುತ್ತಿತ್ತು. ಮನೆಯಲ್ಲಿ ಯಾರೂ ಇರುವಂತೆ ಕಾಣಿಸುತ್ತಿರಲಿಲ್ಲ. ಆಗ ನನ್ನ ಸ್ನೇಹಿತ ಆನಂದ ನಾಯ್ಡುರವರಿಗೆ ಪೊನು ಮಾಡಿದೆ. ಮತ್ತು ನೆರೆ ಹೊರೆಯವರಾದ ಮಂಜುನಾಥ ಮತ್ತು ಇತರೆಯವರಿಗೆ ತಿಳಿಸಿದಾಗ ಅವರೆಲ್ಲರೂ ಬಂದರು. ಬಾಗಿಲನ್ನು ಜೋರಾಗಿ ತಳ್ಳಿ ಒಳಕ್ಕೆ ಹೋಗಿ ನೋಡಿದೆವು. ಮೊದಲನೆ ವರಾಂಡದಲ್ಲಿ ಫ್ಯಾನಿಗೆ ವೇಲನ್ನು ಕಟ್ಟಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿದ್ದ. ಪೊಲೀಸರಿಗೆ ವಿಚಾರ ತಿಳಿಸಿದೆವು. ಪೋನಿನ ಮೂಲಕ ನನ್ನ ಮಗನ ಅತ್ತೆ ಮಾವನಿಗೂ ವಿಚಾರ ತಿಳಿಸಿದೆವು. ಪೊಲೀಸರು ಮನೆಗೆ ಬಂದರು. ಅಲ್ಲಿ ಪರಿಶೀಲನೆ ಮಾಡಿ ನೋಡಿ ನನ್ನ ಮಗನ ಪ್ರಾಣ ಹೋಗಿದೆ ಎಂದು ಹೇಳಿದರು. ಆಗ ಪೊಲೀಸರು ಮಹಜರ್ ಬರೆದುಕೊಂಡರು. ಪೊಲೀಸರು ಆ ರೂಂನಲ್ಲಿ ಪರಿಶೀಲನೆ ಮಾಡಿದಾಗ

ಹಾಸಿಗೆ ದಿಂಬಿನ ಕೆಳಗೆ ಒಂದು ನೋಟ್ ಪುಸ್ತಕ ಇತ್ತು. ಸದರಿ ನೋಟ್ ಪುಸ್ತಕದಲ್ಲಿ ದಿನಾಂಕ 16/10/2008 ರಂದು ಎಂದು ದಿನಾಂಕ ಬರೆದು ನನ್ನ ಕೊನೆಯ ಆಸೆಗಳು ವಿಲ್ ನಾಮೆ ಎಂದು ಬರೆದಿದ್ದ. ಅದನ್ನು ಪೊಲೀಸರು ಜಪ್ತಿ ಮಾಡಿಕೊಂಡರು. ಪೊಲೀಸರು ನನ್ನ ಮಗನ ಸಾವಿನ ಬಗ್ಗೆ ನನ್ನನ್ನು ವಿಚಾರ ಮಾಡಿದರು. ಆಗ ನನ್ನ ಮಗನಿಗೆ ಮೂರು ಜನ ಆರೋಪಿತರು ಹಿಂಸೆ ಕೊಟ್ಟಿದ್ದ ಕಾರಣ ಆತನು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಎಲ್ಲ ವಿವರಗಳನ್ನು ನಮೂದು ಮಾಡಿ ಬರೆದುಕೊಟ್ಟೆ. ನನ್ನ ಮಗನ ಮೃತದೇಹವನ್ನು ಎಸ್ಸೆನಾರ್ ಆಸ್ಪತ್ರೆಗೆ ಸಾಗಿಸಿದರು. ಮಾರನೇ ದಿವಸ ನನ್ನ ಮಗನ ಶವ ಪರೀಕ್ಷೆಯನ್ನು ಮಾಡಿದರು. ಆತನು ಆತ್ಮಹತ್ಯೆ ಮಾಡಿಕೊಂಡ ರಾತ್ರಿ 9.00 ಗಂಟೆ ನಂತರ ನನ್ನ ಮಗನ ಅತ್ತೆ ಮಾವ ಅಲ್ಲಿಗೆ ಬಂದರು. ನಾವು ಬಹಳ ಬೇಜಾರು ಮತ್ತು ಕೋಪದಲ್ಲಿದ್ದ ಕಾರಣ ಅವರನ್ನು ಮನೆಗೆ ಸೇರಿಸಲಿಲ್ಲ. ಮಾರನೇ ದಿವಸ ಶವಾಗಾರದಿಂದ ನಮಗೆ ಶವವನ್ನು ಕೊಟ್ಟರು. ಶವವನ್ನು ನಮ್ಮ ಸ್ವಂತ ಗ್ರಾಮ, ಗೌರಿಬಿದನೂರು ತಾಲ್ಲೂಕು ಗಿಡಗಾನಹಳ್ಳಿ ಗ್ರಾಮಕ್ಕೆ ತೆಗೆದುಕೊಂಡು ಹೊಗಿ ಅಂತ್ಯಕ್ರಿಯೆ ಮಾಡಿದೆವು. ಶವಸಂಸ್ಕಾರಕ್ಕೆ ನನ್ನ ಸೊಸೆ ಮಾತ್ರ ಬಂದಿದ್ದಳು. ಆತನ ಮಾವ ಬಂದು ಬಹಳ ದೂರದಲ್ಲಿ ನಿಂತಿದ್ದ. 3 ಮತ್ತು 11 ನೇ ದಿವಸದ ಮರಣಾನಂತರದ ಕಾರ್ಯಕ್ರಮಗಳನ್ನು ಮಾಡಿಸಲು ನಾನು ಪತ್ರಿಕೆಯಲ್ಲಿ ಪ್ರಕಟಣೆ ಮಾಡಿಸಿದೆ.ಆ ಕಾರ್ಯಕ್ರಮಗಳಿಗೂ ಕೂಡ ಆತನ ಅತ್ತೆ ಮಾವ ಬಂದಿರಲಿಲ್ಲ. 3 ನೇ ಆರೋಪಿತ ಶ್ರೀನಿವಾಸ ಈತನ ಸಾವಿನ ಸುದ್ದಿ ತಿಳಿದು ಬೆಂಗಳೂರಿಗೆ ಹೋಗಿ ತಲೆ ಮರೆಸಿಕೊಂಡಿದ್ದಾನೆಂದು ಗೊತ್ತಾಯಿತು. ನಾವು ಸಂಪ್ರದಾಯದಂತೆ ಎಲ್ಲಾ ಆಚರಣೆಗಳ್ನು ಮಾಡಿ ಮುಗಿಸಿದಿವು.

ನಾನು ಪೊಲೀಸರಿಗೆ ಕೊಟ್ಟ ದೂರಿನಂತೆ ಪೊಲೀಸರು ಯಾವುದೇ ಕ್ರಮ ಜರುಗಿಸಲಿಲ್ಲ. ಆಗ ನಾನು ಖುದ್ದಾಗಿ ಹೋಗಿ ಸರ್ಕಲ್ ಇನ್ಸಪೆಕ್ಟರ್‌ರವರಿಗೆ ಹೋಗಿ ಕೇಳಿಕೊಂಡಾಗ ನೀನು ರಿಟೈರ್ಡ ಆಗಿದ್ದೀಯ ಇವುಗಳನ್ನೆಲ್ಲಾ ಯಾಕೆ ತಲೆಗೆ ಹಚ್ಚಿಕೊಳ್ಳುತ್ತಿಯಾ ಬಿಟ್ಟು ಬಿಡು ಎಂದು ಸಬೂಬು ಹೇಳಿದರು. ನಾನು ಅವರು ಹೇಳಿದನ್ನು ವಿರೋಧ ಮಾಡಿದಾಗ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಕಳುಹಿಸಿದರು. ನಂತರ ಪೊಲೀಸರು (ಬಿ) ಅಂತಿಮ ವರದಿಯನ್ನು ಸಲ್ಲಿಸಿದ್ದಾರೆಂದು ಗೊತ್ತಾಯಿತು. ಅವರು ಬಿ ಅಂತಿಮ ವರದಿ ಸಲ್ಲಿಸಿರುವ ಬಗ್ಗೆ ನನಗೆ ಯಾವುದೇಮಾಹಿತಿ ಕೊಟ್ಟಿರುವುದಿಲ್ಲ. ನಾನು ಬೇರೆ ದಾರಿ ಕಾಣದೇ ನಾನು ವಕೀಲರ ಮೂಲಕ ಪಿಸಿಆರ್ 275/2008 ರಲ್ಲಿ ಖಾಸಗಿ ಪಿರ್ಯಾದನ್ನು ದಾಖಲು ಮಾಡಿದೆ .

**(ಈ ಹಂತದಲ್ಲಿ ಮಾನ್ಯ ಪಿಪಿರವರು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೇಳಿರುತ್ತಾರೆ, ನೀಡಲಾಯಿತು)**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

**ಸಹಿ/-**

**(ಹೆಚ್.ದೇವರಾಜು)**

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ.